## ಹಸಿರು ಸುಂದರಿ

ಮಲೆನಾಡಿನಲ್ಲಿ ಕೆಂಪು, ಕಪ್ಪು, ಬಿಳಿ ಇತ್ಯಾದಿ ಇರುವೆಗಳನ್ನು ನೋಡಿದ್ದೆ. ಆದರೆ ಬೆಂಗಳೂರಿನಲ್ಲಿ ನಮ್ಮ ತಾರಸಿಯ ಮೇಲೆ ಈ 'ಹಸಿರು ಸುಂದರಿ'ಯನ್ನು ಕಂಡು ಸ್ವಲ್ಪ ಅಚ್ಚರಿಯಾಯ್ತು. ಹಸಿರು ಮೈಮೇಲೆ ಕಪ್ಪು ಪಟ್ಟೆಹೊಂದಿದ್ದು, ನೋಡಲು ಆಕರ್ಷಕವಾಗಿ ಕಾಣುತ್ತದೆ. ಫೋಟೊ ಕ್ಲಿಕ್ಕಿಸಿದ ಮೇಲೆ ತೆಂಗಿನ ಗರಿಯ ಮೇಲೆ ಮತ್ತೊಮ್ಮೆ ಮರೆಯದೇ ಬಾ ಎನ್ನುತ್ತಾ ಬೀಳ್ಕೊಟ್ಟೆ. ಆ ಹಸಿರಿನ ನಡುವೆ ನಿಧಾನವಾಗಿ ಸಾಗಿತು.

■ **ಪೂರ್ಣಿಮಾ ಆಗುಂಬೆ, ಬೆಂಗಳೂರು**





## ಥರ್ಮಾಕೋಲ್‌ನಲ್ಲಿ ಮೈಸೂರು ಅರಮನೆ

ಕಲಾವಿದ ಮಹೇಶ್ ಅವರ ಕೈಚಳಕದಲ್ಲಿ ಥರ್ಮಾಕೋಲ್ ಶೀಟ್‌ನಿಂದ ಸುಂದರವಾಗಿ ಮೂಡಿದ ಕಲಾಕೃತಿ 'ಮೈಸೂರು ಅರಮನೆ'. ಈ ಕಲಾಕೃತಿಗೆ ಥರ್ಮಾಕೋಲ್ ಜೊತೆಗೆ ಸೀಮೆಸುಣ್ಣ, ಪೆವಿಕೋಲ್, ಬಾಲ್ ಮತ್ತು ಕಲರ್ ನಕ್ಕಿಗಳನ್ನು ಬಳಸಲಾಗಿದೆ. ಕಲಾವಿದನ ಕೈಯಲ್ಲಿ ಎಲ್ಲವೂ ರೂಪ ತಾಳುತ್ತದೆ ಎಂಬುದಕ್ಕೆ ಇದು ಸಾಕ್ಷಿ.

■ **ಸುಮತಿ.ಟಿ.ಎನ್., ತಿಪಟೂರು**

## ಇಲಿ ನಿಯಂತ್ರಿಸುವ ಬಲೆ

ಮನೆಗಳಲ್ಲಿ ಇಲಿಗಳು ಹೆಚ್ಚಾದರೆ ಅವುಗಳನ್ನು ಸಾಯಿಸುವುದೇ ಹೆಚ್ಚು. ಅದಕ್ಕೆ ಬದಲಿಗೆ ಹಳ್ಳಿ ಪ್ರದೇಶಗಳಲ್ಲಿ ಇವುಗಳನ್ನು ಸೆರೆಹಿಡಿಯಲೆಂದು ಕಟ್ಟಿಗೆಯಿಂದ ತಯಾರಿಸಿದ ಇಲಿ ಬಲೆ ಬಳಸುತ್ತಾರೆ. ಬಹುತೇಕ ಕಡೆ ಈ ರೀತಿಯ ಬಲೆಗಳು ಇಂದು ಕಣ್ಮರೆಯಾಗಿವೆ. ಈ ಬಲೆಯೊಳಗೆ ಕಬ್ಬಿಣದ ತಂತಿಗಳನ್ನು ಅಳವಡಿಸಿರಲಾಗುತ್ತದೆ. ಈ ತಂತಿಗಳಿಗೆ ಕೊಬ್ಬರಿಯ ಚೂರನ್ನು ಚುಚ್ಚಿ ಇಟ್ಟರೆ ಇಲಿಗಳು ಆಕರ್ಷಿತಗೊಂಡು ಚೂರನ್ನು ತಿನ್ನಲು ಬರುತ್ತವೆ. ಹಾಗೇ ಬಂದಾಗ ಇಲಿಗಳು ಬಲೆಯೊಳಗೆ ಸಿಕ್ಕಿ ಹಾಕಿಕೊಳ್ಳುತ್ತವೆ. ನಂತರ ಅವು ಹೊರಗೆ ಬರಲು ಆಗುವುದಿಲ್ಲ. ಅವುಗಳನ್ನು ದೂರದಲ್ಲಿ ಬಿಟ್ಟು ಬರುತ್ತಾರೆ.

■ **ಜಗದೀಶ. ಎಂ. ಸಂಗಣ್ಣವರ, ಹುಣಶೀಕಟ್ಟಿ**

